**Crl.Misc No**.224/ 2023

**PW** :1

**ದಿನಾಂಕಃ 08-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರವಾಗಿಃ ಶ್ರೀ ಬಿ.ಜಿ.ಎಲ್. ವಕೀಲರಿಂದಃ**

1. ಎದುರುದಾರ ನನ್ನ ಸೋದರ ಮಾವನ ಮಗ ಎಂದರೆ ಸರಿ. ನಾನು ನರ್ಸಿಂಗ್ ಕಲಿತಿರುತ್ತೇನೆ. ಈ ಹಿಂದೆ ನಾನು ಉದ್ಯೋಗದಲ್ಲಿದ್ದೆ ಈಗ ನನಗೆ ಉದ್ಯೋಗ ಇಲ್ಲ. ನೀವು ರೆಡಿಯಂಟ್ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸುಮಾರು 4 ವರ್ಷಗಳ ವರೆಗೂ ನಾನು ಸದರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು, ಎದುರುದಾರ ನಾನು ಕೆಲಸ ಮಾಡುತ್ತಿದ್ದ ಸದರಿ ಆಸ್ಪತ್ರೆಗೆ ಬಂದು ಅಲ್ಲಿನ ಮೇಲಾಧಿಕಾರಿಗಳೊಂದಿಗೆ ಮತ್ತು ನನ್ನ ಸಹ ಸಿಬ್ಬಂದಿಗಳೊಂದಿಗೆ ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದ ಹಾಗೂ ನಾನು ಬೇರೆಯವರ ಜೊತೆ ಓಡಿ ಹೋಗಿರುತ್ತೇನೆ ಎಂದೆಲ್ಲಾ ನನ್ನ ಬಗ್ಗೆ ಎದುರುದಾರ ಸುಳ್ಳು ಅಪವಾದ ಮಾಡುತ್ತಿದ್ದು, ಆಸ್ಪತ್ರೆಯಲ್ಲಿ ಸದರಿ ಅಪವಾದದ ಬಗ್ಗೆ ಎಲ್ಲರೂ ನನ್ನನ್ನು ಪ್ರಶ್ನಿಸಿಲಾರಂಭಿಸಿದ್ದು, ಅದರಿಂದ ನಾನು ಮನನೊಂದು ಸದರಿ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವುದನ್ನು ನಿಲ್ಲಿಸಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ನಾನು ನರ್ಸಿಂಗ್ ಕಲಿಯುತ್ತಿದ್ದಾಗ ಎದುರುದಾರನ ಮನೆಯಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. ನಾನು ಹಾಸ್ಟೇಲ್ ನಲ್ಲಿ ಇದ್ದು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹಾಸ್ಟೇಲ್ ನಲ್ಲಿ ಇದ್ದೆ ನನ್ನ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. ನಾನು ಹಾಸ್ಟೇಲ್ ನಲ್ಲಿ ಇದ್ದು ವಿದ್ಯಾಭ್ಯಾಸ ಮಾಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನನ್ನ ಹಾಸ್ಟೇಲ್ ನ ಖರ್ಚು ವೆಚ್ಚವವನ್ನು ಸಹ ಎದುರುದಾರ ಮತ್ತು ಅವರ ಮನೆಯವರೇ ತುಂಬಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಎಜುಕೇಶನ್ ಲೋನ್ ಪಡೆದು ನನ್ನ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ.

3. ನಾನು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಎದುರುದಾರ ಹಾಗೂ ಅವರ ತಂದೆ ಮತ್ತು ತಾಯಿ ದುಡಿಯುತ್ತಿದ್ದರು ಎಂದರೆ ಸರಿ. ಎದುರುದಾರ ಹಾಗೂ ಅವರ ತಂದೆ ಮತ್ತು ತಾಯಿ ಕೂಲಿ ಕೆಲಸ ಮಾಡಿ ನನಗೆ ವಿದ್ಯಾಭ್ಯಾಸವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ಬಡತನವಿದ್ದ ಕಾರಣ ಎದುರುದಾರ ಹಾಗೂ ಅವರ ತಂದೆ ಮತ್ತು ತಾಯಿ ನನಗೆ

ವಿದ್ಯಾಭ್ಯಾಸವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಎಜುಕೇಶನ್ ಲೋನ್ ಪಡೆದು ನನ್ನ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. ನಾನು ಎದುರುದಾರರ ಸೋದರತ್ತೆಯ ಮಗಳಾಗಿರುವ ಕಾರಣ ಎದುರುದಾರ ಹಾಗೂ ಅವರ ತಂದೆ ಮತ್ತು ತಾಯಿಯೇ ಎಲ್ಲಾ ಖರ್ಚು ವೆಚ್ಚಗಳನ್ನು ನಮ್ಮಿಬ್ಬರ ವಿವಾಹವನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮದುವೆಯ ಹೆಚ್ಚಿನ ಖರ್ಚನ್ನು ನನ್ನ ತವರು ಮನೆಯವರೇ ನೋಡಿಕೊಂಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

4. ಮದುವೆಯ ಸಮಯದಲ್ಲಿ ಎದುರುದಾರ ಮತ್ತು ಅವರ ಮನೆಯವರು ನನಗೆ 100 ಗ್ರಾಂ ಚಿನ್ನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮದುವೆಯ ಕಾಲಕ್ಕೆ ನನ್ನ ತವರು ಮನೆಯವರು ಕೊಟ್ಟಿದ್ದ ಚಿನ್ನವನ್ನು ಎದುರುದಾರ ಗಿರವಿ ಇಟ್ಟಿರುತ್ತಾನೆ ಎಂದು ಸ್ವತಃ ನುಡಿದಿರುತ್ತಾರೆ. 2 ನೇ ಅರ್ಜಿದಾರನ ಜನನವಾದಾಗ ಆಸ್ಪತ್ರೆಯ ಎಲ್ಲಾ ಖರ್ಚು ವೆಚ್ಚಗಳನ್ನು ಎದುರುದಾರನೇ ಭರಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸರ್ಕಾರಿ ಆಸ್ಪತ್ರೆಯಲ್ಲಿ 2 ನೇ ಅರ್ಜಿದಾರನಿಗೆ ಜನನ ಕೊಟ್ಟಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಖರ್ಚು ಆಗಿರುವುದಿಲ್ಲ ಹಾಗೂ ಆಸ್ಪತ್ರೆಯ ಸಣ್ಣ ಪುಟ್ಟ ಖರ್ಚುಗಳನ್ನು ನನ್ನ ತವರು ಮನೆಯವರೇ ನೋಡಿಕೊಂಡಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

5. ನನಗೆ ಓಡಾಡಲು ಎದುರುದಾರ ದ್ವಿಚಕ್ರ ವಾಹವನ್ನು ತೆಗೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಬ್ಯಾಂಕಿನಿಂದ ಲೋನ್ ಪಡೆದು ದ್ವಿಚಕ್ರ ವಾಹನವನು ಖರೀದಿಸಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ.ನಾನು ಈಗಲೂ ಸಹ ರೆಡಿಯಂಟ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ರೆಡಿಯಂಟ್ ಆಸ್ಪತ್ರೆಯಲ್ಲಿ ಕೆಲಸ ಬಿಟ್ಟು ಒಂದುವರೆ ವರ್ಷಗಳಾಗಿರುತ್ತದೆ ಎಂದು ನುಡಿದಿರುತ್ತಾರೆ.

**ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**